## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 18-12-2021 ರಂದು ಶ್ರೀ.ವೆಂಕಟದುರ್ಗಾಪ್ರಸಾದ್ ಕುಂಚಾಲ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರ ವಿವರ:-**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ವೆಂಕಟ ದುರ್ಗಾಪ್ರಸಾದ್ ಕುಂಚಾಲ, | ಜಂಟಿ ನಿರ್ದೇಶಕರು (ನಗರಯೋಜನೆ- ಸ್ಕ್ವಾಡ್) ಹಾಗೂ ನೋಡಲ್ಅಧಿಕಾರಿ& ವಾರ್ಡ್ ಸಮಿತಿಅಧ್ಯಕ್ಷರು, ವಾರ್ಡ್ ಸಂಖ್ಯೆ-30 ಕೆ.ಜಿ.ಹಳ್ಳಿ |
| 2 | ಶ್ರೀಮತಿ.ಸಾವಿತ್ರಿ | ಸಹಾಯಕ ಅಭಿಯಂತರರು, & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ. |
| 3 | ಡಾ|| ದಿವ್ಯ.ಜಿ | ವೈಧ್ಯಾಧಿಕಾರಿಗಳು ,ಕೆ.ಜಿ.ಹಳ್ಳಿ UPHC |
| 4 | ಶ್ರೀ.ವಿನಯ್ | ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ ಬಿಬಿಎಂಪಿ |
| 5 | ಶ್ರೀ.ಆನಂದ್ | ಕಿರಿಯ ಅಭಿಯಂತರರು ಬೆಸ್ಕಾಂ ಉಪ-ವಿಭಾಗ |
| 6 | ಶ್ರೀ.ರಾಜಶೇಖರ್ | ಪೊಲೀಸ್ ಕಾನ್ಸ್‌ಟೇಬಲ್, ಕೆ.ಜಿ.ಹಳ್ಳಿ ಸಂಚಾರಿ ಪೊಲೀಸ್ ಠಾಣೆ |
| 7 | ಕುಮಾರಿ. ಮೇರಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು ಕೆ.ಜಿ.ಹಳ್ಳಿ |
| 8 | ಶ್ರೀ.ಮಂಜುನಾಥ್ | ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 9 | ಶ್ರೀ.ವೆಂಕಟೇಶ್ | ತೋಟಗಾರಿಕೆ ಪರಿವೀಕ್ಷಕರು ಬಿಬಿಎಂಪಿ |
| 10 | ಶ್ರೀ.ಪಿ.ಚಂದ್ರಶೇಖರ್.ಜಿ.ಎಸ್ | HRPG |
| 11 | ಶ್ರೀ.ರಾಜೇಂದ್ರ | ಕೆ.ಜಿ.ಹಳ್ಳಿ ವಾರ್ಡ್ ಬ್ಲಾಕ್ ಅಧ್ಯಕ್ಷರು |
| 12 | ಶ್ರೀಮತಿ.ಸುಮಿತ್ರ | ಕೆ.ಜಿ.ಹಳ್ಳಿ ವಾರ್ಡ್ ಬ್ಲಾಕ್ ಅಧ್ಯಕ್ಷರು |
| 13 | ಶ್ರೀ.ವಿ.ಸತ್ಯನಾರಾಯಣ | ಸಾರ್ವಜನಿಕರು |
| 14 | ಶ್ರೀ.ಜೈ.ದೇವ ಪ್ರಕಾಶ್ | ಸಾರ್ವಜನಿಕರು |
| 15 | ಶ್ರೀ.ರಾಬರ್ಟ್ | ಸಾರ್ವಜನಿಕರು |
| 16 | ಶ್ರೀ.ಮೊಹಮ್ಮದ್ ಅಫ್ಸರ್ | ಸಾರ್ವಜನಿಕರು |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ದಿನಾಂಕ: 25.11.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮ.

| ಕ್ರಮ ಸಂಖ್ಯೆ | ವಿಷಯ | ಕೈಗೊಂಡಿರುವ ಕ್ರಮ |
|---|---|---|
| 1 | **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-** ಸಭೆಯಲ್ಲಿ ಹಾಜರಿದ್ದ ಶ್ರೀ.ಪಿ.ಚಂದ್ರಶೇಖರ್ RWA ರವರು, ವಾರ್ಡ್ ವ್ಯಾಪ್ತಿಯಲ್ಲಿ 3ನೇ, 6ನೇ ಮುಖ್ಯರಸ್ತೆ, ಮತ್ತು 10ನೇ, 11ನೇ ಮತ್ತು 12ನೇ ಅಡ್ಡರಸ್ತೆಗಳಲ್ಲಿ 11 ಬೀದಿ ದೀಪಗಳು ಸಮರ್ಪಕವಾಗಿ ನಿರ್ವಹಣೆಆಗುತ್ತಿಲ್ಲ ಮತ್ತು ಸಂಬಂಧಪಟ್ಟ ಸಹಾಯಕ ಅಭಿಯಂತರರು ದೂರವಾಣಿ ಕರೆಗಳನ್ನು ಸ್ವೀಕರಿಸದೇ ಇರುವ ಬಗ್ಗೆ ವಾರ್ಡ್ ಸಮಿತಿ ಸಭೆಯಲ್ಲಿ ಪತ್ರದ ಮೂಲಕ ತಿಳಿಸಿರುತ್ತಾರೆ. (ಪ್ರತಿಯನ್ನು ಲಗತ್ತಿಸಿದೆ) ನಂತರ ಸಭೆಯಲ್ಲಿ ಶ್ರೀ.ವಿನಯ್ ಸಹಾಯಕ ಅಭಿಯಂತರರು ಹಾಗೂ ಶ್ರೀ.ಶಂಕರ್ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ದೂರವಾಣಿ ಮುಖಾಂತರ ಕರೆ ಮಾಡಿದಾಗ ಕರೆಯನ್ನು ಸ್ವೀಕರಿಸಿರುವುದಿಲ್ಲ.<br>ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ (ಪೂರ್ವ) ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. | ಕ್ರಮ ಕೈಗೊಳ್ಳಲಾಗಿರುತ್ತದೆ. |
| 2 | **ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-**<br>5ನೇ ಮತ್ತು 6ನೇ ಮುಖ್ಯರಸ್ತೆ ಮತ್ತು 2ನೇ ಅಡ್ಡರಸ್ತೆ, ಪಿಳ್ಳಣ್ಣಗಾರ್ಡನ್ ಇಲ್ಲಿ ದಿನನಿತ್ಯ ಕುಡಿಯುವ ನೀರಿನ ಸರಬರಾಜು ಆಗದೇ ಇದ್ದರೂ ನೀರಿನ ಬಿಲ್ ಹೆಚ್ಚಾಗಿ ಬರುತ್ತಿರುತ್ತದೆಎಂದು ಶ್ರೀ.ಪಿ.ಚಂದ್ರಶೇಖರ್ RWA ರವರು ತಿಳಿಸಿರುತ್ತಾರೆ. ಕುಡಿಯುವ ನೀರು ಸರಬರಾಜು ಸಮರ್ಪಕವಾಗಿ ಆಗುತ್ತಿರುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸಭೆಯಲ್ಲಿ ಸೂಚಿಸಿರುತ್ತಾರೆ.<br>ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. | ಬಾಕಿ ಇರುತ್ತದೆ. |
| 3 | **ಬೆಸ್ಕಾಂ ವಿಭಾಗ:-**<br>ವಾರ್ಡ್ ವ್ಯಾಪ್ತಿಯ 3ನೇ ಮುಖ್ಯರಸ್ತೆ, ಬಿ.ಎಂ.ಲೇಔಟ್, 13ನೇ ಅಡ್ಡರಸ್ತೆ ವಿನೋಭನಗರ, 12ನೇ ಅಡ್ಡರಸ್ತೆ ಸೊಣ್ಣಪ್ಪ ಬ್ಲಾಕ್ ಇಲ್ಲಿ ಕೇಬಲ್‌ಗಳನ್ನು ಅಳವಡಿಸಿದ್ದು, ಸದರಿ ಸ್ಥಳಗಳಲ್ಲಿ ಡೆಬ್ರೀಸ್ ತೆರವುಗೊಳಿಸಿ ಗುಂಡಿಗಳನ್ನು ಮುಚ್ಚಿಸಲು ಹಾಗೂ ವಾರ್ಡ್ ವ್ಯಾಪ್ತಿಯ ಪಿಳ್ಳಣ್ಣಗಾರ್ಡನ್ ಪ್ರದೇಶದಲ್ಲಿನ ಮರಗಳು ವಿದ್ಯುತ್ ತಂತಿಗಳ ಮೇಲೆ ಹಾದು ಹೋಗಿರುವ ಕೊಂಬೆಗಳನ್ನು ಕತ್ತರಿಸಲು ಸಭೆಯಲ್ಲಿ ತಿಳಿಸಲಾಯಿತು.<br>ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.<br>**(ಕ್ರಮ :- ಸ.ಕಾ.ಅ ಬೆಸ್ಕಾಂ ಉಪ-ವಿಭಾಗ, ಕೆ.ಜಿ.ಹಳ್ಳಿ)** | ಬಾಕಿ ಇರುತ್ತದೆ. |

| | | |
|---|---|---|
| 4 | **ಘನತ್ಯಾಜ್ಯ ನಿರ್ವಹಣೆ:-**<br>ವಾರ್ಡ್ ವ್ಯಾಪ್ತಿಯ ವಿನೋಭನಗರ ದೋಬಿ ಘಾಟ್ ಪ್ರದೇಶದಲ್ಲಿ ಘನತ್ಯಾಜ್ಯ ವಿಂಗಡಣೆ ಮತ್ತು ರಸ್ತೆಗಳನ್ನು ಸರಿಯಾಗಿ ಕಸ ಗುಡಿಸುತ್ತಿಲ್ಲವೆಂದು ಶ್ರೀಮತಿ.ಶೀಲಾ ಮಹಿಳಾ ವಾರ್ಡ್ ಅಧ್ಯಕ್ಷರು ರವರು ತಿಳಿಸಿರುತ್ತಾರೆ. ಮತ್ತು ರೈಲ್ವೆ ಟ್ರ್ಯಾಕ್‌ಗೆ ಹೊಂದಿಕೊಂಡ ರಸ್ತೆಗಳಲ್ಲಿ ನಿಯಮಿತವಾಗಿ ಘನತ್ಯಾಜ್ಯ ನಿರ್ವಹಣೆ ಹಾಗೂ ಕಸ ಸಂಗ್ರಹಣೆಗೆ ಆಟೋಗಳು ಬರುತ್ತಿಲ್ಲ ಎಂಬುದಾಗಿ ಶ್ರೀ.ಎ.ರಾಬರ್ಟ್‌ರವರು ಸಭೆಯಲ್ಲಿ ತಿಳಿಸಿದರು.<br>ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ.ಮೋನಿಕಾ. ಕಿರಿಯಆರೋಗ್ಯ ಪರಿವೀಕ್ಷಕರು ರವರಿಗೆ ಪರಿಶೀಲಿಸಲು ಹಾಗೂ ಪೌರಕಾರ್ಮಿಕರು ಪ್ರತಿ ರಸ್ತೆಯಲ್ಲಿ ಕಸ ಗುಡಿಸಿರುವ ಬಗ್ಗೆ ಪ್ರತಿ ರಸ್ತೆಗೆ ಸಂಬಂಧಪಟ್ಟಂತೆ ಒಂದು ಮನೆಯಿಂದ ಪುಸ್ತಕದಲ್ಲಿ ಸಹಿ ಪಡೆಯಲು ಸೂಚಿಸಿದರು.<br>**(ಕ್ರಮ :- ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)** | ಕ್ರಮ ಕೈಗೊಳ್ಳಲಾಗಿರುತ್ತದೆ |
| 5 | **ಕೊಳವೆ ಬಾವಿ:-**<br>6ನೇ, 9ನೇ ಮತ್ತು 10ನೇ ಮುಖ್ಯರಸ್ತೆ ಪಿಳ್ಳಣ್ಣಗಾರ್ಡನ್‌ನಲ್ಲಿರುವ ಬೋರ್‌ವೆಲ್‌ಗಳನ್ನು ವಾಲ್‌ಮೆನ್‌ಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೋರ್‌ವೆಲ್ ವಿಭಾಗರವರಿಗೆ ಕ್ರಮಕೈಗೊಳ್ಳಲು ಸೂಚಿಸಿರುತ್ತಾರೆ.<br>**(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೋರ್‌ವೆಲ್ ವಿಭಾಗ)** | ಬಾಕಿ ಇರುತ್ತದೆ. |
| 6 | **ಆರೋಗ್ಯ ವೈಧ್ಯಾಧಿಕಾರಿಗಳು:-**<br>ವಾರ್ಡ್‌ನ13ನೇ ಅಡ್ಡರಸ್ತೆ, ವಿನೋಭನಗರದ ಚರ್ಚ್ ಪಕ್ಕದಲ್ಲಿರುವ, ಬೇಕರಿಯ ಚಿಮಿನಿಯಿಂದ ಹೊಗೆ ಬರುತ್ತಿದ್ದು, ಇದರಿಂದ ಚರ್ಚ್‌ರವರಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಶ್ರೀ.ಎ.ರಾಬರ್ಟ್‌ರವರು ತಿಳಿಸಿರುತ್ತಾರೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಪ್ರದೇಶಗಳಿಗೆ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಮಾಡಲು ಶ್ರೀ ಮಜಹುದ್ದೀನ್‌ರವರು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ವಾರ್ಡ್‌ನ ಪಿಳ್ಳಣ್ಣಗಾರ್ಡನ್ ನಲ್ಲಿರುವ PHC ಕಿಯೋನಿಕ್ಸ್‌ಗೆ ಸಿಬ್ಬಂದಿಯನ್ನು ನಿಯೋಜಿಸಲು ತಿಳಿಸಲಾಯಿತು.<br>ಈ ವಿಷಯದ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರುರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**(ಕ್ರಮ:- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)** | ಭಾಗಶಃ ಬಾಕಿ ಇರುತ್ತದೆ. |

| | | |
|---|---|---|
| 7 | **<u>ಕಾರ್ಮಿಕ ಇಲಾಖೆ:-</u>** 13ನೇ ಅಡ್ಡರಸ್ತೆ, ವಿನೋಭನಗರ, ಬೇಕರಿಯಲ್ಲಿ ಬಾಲ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಶ್ರೀ.ಎ.ರಾಬರ್ಟ್ ರವರು ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ಪರಿಶೀಲಿಸಿ ಲೇಬರ್ ಇನ್ಸ್‌ಪೆಕ್ಟರ್ ರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**<u>(ಕ್ರಮ:- ಲೇಬರ್ ಇನ್ಸ್‌ಪೆಕ್ಟರ್ ಕಾರ್ಮಿಕ ಇಲಾಖೆ)</u>** | ಬಾಕಿ ಇರುತ್ತದೆ. |
| 8 | **<u>ಕಾಮಗಾರಿ ಇಲಾಖೆ-</u>** ವಾರ್ಡ್ ವ್ಯಾಪ್ತಿಯ ವಿನಾಯಕಟೆಂಪಲ್ ಸ್ಟ್ರೀಟ್, ಅಂಗಾಳ ಪರಮೇಶ್ವರಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ರಸ್ತೆ ಗುಂಡಿಗಳಿದ್ದು, ರಸ್ತೆಯನ್ನು ದುರಸ್ಥಿಪಡಿಸಲು ಹಾಗೂ ಫುಟ್‌ಪಾತ್ ಒತ್ತುವರಿಯನ್ನು ತೆರವುಗೊಳಿಸಲು ಶ್ರೀ.ಚಂದ್ರಶೇಖರ್ RWA ರವರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ಕಾಮಗಾರಿ ಇಲಾಖೆ ಬಿಬಿಎಂಪಿ ರವರಿಗೆಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**<u>(ಕ್ರಮ:- ಸ.ಕಾ.ಅ ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ)</u>** | ಕ್ರಮ ಕೈಗೊಳ್ಳಲಾಗಿರುತ್ತದೆ |
| 9 | **<u>ರಸ್ತೆ ಮೂಲಭೂತ ಸೌಕರ್ಯಇಲಾಖೆ-</u>** ವಾರ್ಡ್ ವ್ಯಾಪ್ತಿಯ ವಿನಾಯಕ ಟೆಂಪಲ್ ಸ್ಟ್ರೀಟ್, ನಾಗವಾರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳಿದ್ದು, ರಸ್ತೆಯನ್ನು ದುರಸ್ಥಿಪಡಿಸಲು ಶ್ರೀಮತಿ.ಶೀಲಾ ಮಹಿಳಾ ವಾರ್ಡ್ ಅಧ್ಯಕ್ಷರು ರವರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ಕಾರ್ಯಪಾಲಕ ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರಿಗೆಕ್ರಮ ಕೈಗೊಳ್ಳಲು ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.<br>**<u>(ಕ್ರಮ:- ಸ.ಕಾ.ಅ ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿ.ಬಿ.ಎಂ.ಪಿ)</u>** | ಬಾಕಿ ಇರುತ್ತದೆ. |
| 10 | **<u>ತೋಟಗಾರಿಕೆ ಇಲಾಖೆ-</u>**ವಾರ್ಡ್ ವ್ಯಾಪ್ತಿಯ ಅಂಬೇಡ್ಕರ್ ಪಾರ್ಕ್ ಉದ್ಯಾನವನವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲವೆಂದು ಶ್ರೀ.ಮಜಹುರುದ್ದೀನ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ತೋಟಗಾರಿಕೆ ಅಧೀಕ್ಷಕರು ರವರಿಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**(ಕ್ರಮ: <u>ತೋಟಗಾರಿಕೆ ಇಲಾಖೆ ಬಿ.ಬಿ.ಎಂ.ಪಿ)</u>** | ಕ್ರಮ ಕೈಗೊಳ್ಳಲಾಗಿರುತ್ತದೆ |

| | | |
|---|---|---|
| 11 | **<u>ಪೋಲೀಸ್ ಇಲಾಖೆ:-</u>**<br>ವಾರ್ಡ್ ವ್ಯಾಪ್ತಿಯ ಎ.ಕೆ.ಕಾಲೋನಿ ವಿನೋಭನಗರದ ಹತ್ತಿರವಿರುವ ರೈಲ್ವೆಟ್ರ್ಯಾಕ್‌ಗೆ ಹೊಂದಿಕೊಂಡಿರುವ ರಸ್ತೆಯಲ್ಲಿ ಹಾಗೂ ರೋಷನಿ ಆಂಗ್ಲಶಾಲೆ ಮತ್ತು ಕಾಲೇಜ್ ಹತ್ತಿರ ಕೆಲವು ಅನಾಮಧೇಯ ವ್ಯಕ್ತಿಗಳು ಕುಡಿದು ಪಾನಮತ್ತರಾಗಿ ರಸ್ತೆಯಲ್ಲಿ ಓಡಾಡುತ್ತಿರುವ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆ ಮಾಡುತ್ತಿರುವುದಾಗಿ ಶ್ರೀ.ಮಜಹುದ್ದೀನ್ ರವರು ಸಭೆಯಲ್ಲಿ ತಿಳಿಸಿದರು<br>ಈ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ.ಟಿ.ಆರ್.ಗಂಗಾಧರ್ ಮೂರ್ತಿ, ಎ.ಎಸ್.ಐ, ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ ರವರಿಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.<br>**(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ)** | ಭಾಗಶಃ ಬಾಕಿ ಇರುತ್ತದೆ. |
| 12 | **<u>ಅರಣ್ಯ ಇಲಾಖೆ:-</u>**<br>ವಾರ್ಡ್ ವ್ಯಾಪ್ತಿಯಲ್ಲಿನ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳ ಮೇಲೆ ಹಾಗೂ ಕಟ್ಟಡದ ಮುಂಭಾಗ ಹಾದು ಹೋಗಿರುವ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಲು ಸಭೆಯಲ್ಲಿ ತಿಳಿಸಲಾಯಿತು.<br>ಈ ವಿಷಯದ ಬಗ್ಗೆ ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.<br>**(ಕ್ರಮ: ಉಪ ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ)** | ಬಾಕಿ ಇರುತ್ತದೆ. |
| 13 | **<u>ಸ್ಲಂಬೋರ್ಡು:-</u>**<br>ವಾರ್ಡ್ ವ್ಯಾಪ್ತಿಯ ಇ.ಡಬ್ಲ್ಯೂ.ಎಸ್ ಕ್ವಾಟ್ರಸ್‌ನ ವಸತಿಗಳಿಗೆ ಈಗಾಗಲೇ ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಮೀಟರ್‌ಗಳನ್ನು ಅಳವಡಿಸಲು ಹಾಗೂ ಕ್ವಾಟ್ರಸ್ ಪ್ರದೇಶದಲ್ಲಿ ಒಳಚರಂಡಿ ಪೈಪ್‌ಲೈನ್ ದುರಸ್ಥಿ ಪಡಿಸಲು ಸುಮಾರು ಬಾರಿ ಕೋರಿಕೊಂಡರೂ ಸಹ ಈವರೆಗೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಶ್ರೀ.ಎರನ್ ಸುರೇಶ್‌ಕುಮಾರ್‌ರವರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಈ ವಿಷಯದ ಬಗ್ಗೆ ಕೊಳಚೆ ನಿರ್ಮೂಲನ ಮಂಡಳಿ ಇಲಾಖೆ ಅಧಿಕಾರಿ ರವರಿಗೆ ಕ್ರಮ ಕೈಗೊಳ್ಳಲು ತಿಳಿಸಲು ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.<br>**(ಕ್ರಮ: ಸ.ಕಾ.ಅಕೊಳಚೆ ನಿರ್ಮೂಲನ ಮಂಡಳಿ ಇಲಾಖೆ)** | ಬಾಕಿ ಇರುತ್ತದೆ. |

1) **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-**ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಹಗಲು ವೇಳೆಯಲ್ಲಿ ವಾಹನ ಮತ್ತು ಲೇಬರ್‌ಗಳನ್ನು ಕಳುಹಿಸಿಕೊಡಲು ಶ್ರೀ.ಇಕ್ಬಾಲ್ ಹುಸ್ಸೈನ್ ರವರು ತಿಳಿಸಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಶ್ರೀ.ವಿನಯ್ ಸಹಾಯಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ ರವರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.
**(ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ವಿಭಾಗ ಬಿ.ಬಿ.ಎಂ.ಪಿ)**

2) **ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ವಾರ್ಡ್ ವ್ಯಾಪ್ತಿಯಲ್ಲಿ ಬಿಲಾಲ್‌ನಗರ, ಮೆಡಿಸ್ಕೋಪ್ ಆಸ್ಪತ್ರೆಯ ಸುತ್ತಲೂ ಪ್ರದೇಶದಲ್ಲಿ ಅಳವಡಿಸಿರುವ ನೀರಿನ ಪೈಪ್‌ಲೈನ್‌ಗಳಿಗೆ ಹೊಸ ಲಿಂಕ್ ಮಾಡಲು ಶ್ರೀ.ಜಮೀಲ್ ರವರು ತಿಳಿಸಿರುತ್ತಾರೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಲ್‌ಮೆನ್‌ಗಳ ಷೆಡ್ಯೂಲ್ ಅನ್ನು ನೀಡಲು ಶ್ರೀ.ಅಫ್ಸರ್ ರವರು ತಿಳಿಸಿರುತ್ತಾರೆ. ಈ ಸಭೆಯಲ್ಲಿ ಹಾಜರಿದ್ದ ಶ್ರೀ.ಮಂಜುನಾಥ್ Water Inspector ರವರಿಗೆ ಹೊಸ ಲಿಂಕ್ ಮಾಡಿರುವ ಬಗ್ಗೆ ಮಾಹಿತಿ ಹಾಗೂ ವಾಲ್‌ಮೆನ್‌ಗಳ ಷೆಡ್ಯೂಲ್ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ತಿಳಿಸುವಂತೆ ಸಭೆಯಲ್ಲಿ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ರವರ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
**(ಕ್ರಮ :- ಸ.ಕಾ.ಅಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್)**

3) **ಘನತ್ಯಾಜ್ಯ ನಿರ್ವಹಣೆ:-**ವಾರ್ಡ್ ವ್ಯಾಪ್ತಿಯ ಪಾರಿಜಾತ ಶಾಲೆಯ ರಸ್ತೆಯಲ್ಲಿನ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲಾಗಿದ್ದು, ಸದರಿ ಸ್ಥಳದ ಸ್ವಚ್ಛತೆಯನ್ನು ಕಾಪಾಡಲು ಶ್ರೀ.ರಾಜೇಂದ್ರ ವಾರ್ಡ್ ಬ್ಲಾಕ್‌ನ ಅಧ್ಯಕ್ಷರು ರವರು ತಿಳಿಸಿದ್ದು ಹಾಗೂ 7ನೇ ಮುಖ್ಯರಸ್ತೆ ಪಿಳ್ಳಣ್ಣಗಾರ್ಡನ್ ಸುತ್ತಮುತ್ತಲೂ ರಸ್ತೆಗಳನ್ನು ದಿನನಿತ್ಯ ಕಸ ಗುಡಿಸುತ್ತಿಲ್ಲವೆಂದು ಶ್ರೀ.ಫ್ರಾನ್ಸಿಸ್ ರವರು ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಮಾರ್ಷಲ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.
**(ಕ್ರಮ :-ಸ.ಕಾ.ಅ ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)**

4) **ಆರೋಗ್ಯ ವೈದ್ಯಾಧಿಕಾರಿಗಳು:-** ವಾರ್ಡ್ ವ್ಯಾಪ್ತಿಯಲ್ಲಿ ಆರೋಕ್ಯಮ್ಮ ಲೇಔಟ್ ಮತ್ತು ವೆಂಕಟೇಶಪುರ ಬಡಾವಣೆಯಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಮಾಡಿರುವ ಬಗ್ಗೆ ಶ್ರೀ.ಎರ್ರನ್ ಸುರೇಶ್ ರವರು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು. ವಾರ್ಡ್‌ನ ಪಿಳ್ಳಣ್ಣಗಾರ್ಡನ್ ಪ್ರದೇಶದಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಮಾಡದೆ ಇರುವ ಬಗ್ಗೆ ಶ್ರೀ.ಚಂದ್ರಶೇಖರ್.ಪಿ ರವರು ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳಲು ತಿಳಿಸಲು ಹಾಗೂ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲುವಾರ್ಡ್ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಮರಣ ಹೊಂದಿರುವ ಕುಟುಂಬದವರಿಗೆ ಎ.ಪಿ.ಎಲ್ ಕಾರ್ಡ್ ಹೊಂದಿರುವವರಿಗೆ ರೂ.50,000/- ಮತ್ತು ಬಿ.ಪಿ.ಎಲ್ ಕಾರ್ಡ್ ಹೊಂದಿರುವವರಿಗೆ ರೂ.1,50,000/- ಗಳನ್ನು ಕೋವಿಡ್19 ಡೆತ್ ರಿಲೀಫ್ ನೀಡುತ್ತಿರುವುದಾಗಿ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ಬೇರೆ ರಾಜ್ಯದಿಂದ ಬಂದಿರುವ ಕಾವಲುಗಾರರು / ಕೆಲಸಗಾರರು ಗುರುತಿನ ಚೀಟಿಯನ್ನು ಹೊಂದಿರುವುದಿಲ್ಲ. ಅಂತಹ ವ್ಯಕ್ತಿಗಳಿಗೆ ವಿಶೇಷ ಕೋಟಾದಡಿಯಲ್ಲಿ ವ್ಯಾಕ್ಸಿನೇಷನ್ ನೀಡಲಾಗುವುದೆಂದು ಶ್ರೀಮತಿ.ದಿವ್ಯಾ ವೈದ್ಯಾಧಿಕಾರಿ ರವರು ತಿಳಿಸಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳಿಗೆ ಕ್ರಮಕೈಗೊಳ್ಳಲು ತಿಳಿಸಲು ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)

5) ಕಾಮಗಾರಿ ಇಲಾಖೆ- ವಾರ್ಡ್ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿಶೀಲಿಸಿ ಸುರಕ್ಷತಾ ಕ್ರಮ ಕೈಗೊಳ್ಳಲು ಶ್ರೀ.ಎ.ರಾಬರ್ಟ್ ರವರು ಸಭೆಯಲ್ಲಿ ತಿಳಿಸಿರುತ್ತಾರೆಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ 20 ರಸ್ತೆ ಉಬ್ಬುಗಳಿಗೆ Zebra Painting ಮಾಡಿಸಲು ಶ್ರೀ.ಪಿ.ಚಂದ್ರಶೇಖರ್ ರವರು ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಟ್ಟಡಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ಹಾಗೂ ಸ್ಥಳ ಪರಿಶಿಲಿಸಿ ಅಧಿಕೃತ ರಸ್ತೆ ಉಬ್ಬುಗಳಿಗೆ ಪೈಂಟಿಂಗ್ ಮಾಡಿಸಲು ಇನ್ನು ಇತರೆ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲುವಾರ್ಡ್‌ನನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ:- ಸ.ಕಾ.ಅ ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬಿ.ಬಿ.ಎಂ.ಪಿ)

6) ರಸ್ತೆ ಮೂಲಭೂತ ಸೌಕರ್ಯಇಲಾಖೆ- ವಾರ್ಡ್ ವ್ಯಾಪ್ತಿಯ ನಾಗವಾರ ಮುಖ್ಯರಸ್ತೆಯ (ಬಿಲಾಲ್‌ನಗರದಿಂದ ವಿನಾಯಕಟೆಂಪಲ್ ಸ್ಟ್ರೀಟ್ ವರೆಗೆ)ಚರಂಡಿಯಲ್ಲಿ ಹೂಳು ತುಂಬಿರುವ ಬಗ್ಗೆ ಶ್ರೀ.ಜಮೀಲ್ ಸಾರ್ವಜನಿಕ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ವಿಷಯದ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರಿಗೆಕ್ರಮ ಕೈಗೊಳ್ಳಲು ನೋಡಲ್‌ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿ.ಬಿ.ಎಂ.ಪಿ)

7) ತೋಟಗಾರಿಕೆ ಇಲಾಖೆ ಬಿ.ಡಿ.ಎ -ವಾರ್ಡ್ ವ್ಯಾಪ್ತಿಯ 9ನೇ ಮುಖ್ಯರಸ್ತೆ ಪಿಳ್ಳಣ್ಣಗಾರ್ಡನ್, ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿ ಬಿ.ಡಿ.ಎ ವತಿಯಿಂದ ಪಾರ್ಕ್ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ಪಾರ್ಕ್ ನಿರ್ವಹಣೆ ಮಾಡಲು ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ಪಾರ್ಕ್ ತಮ್ಮ ಇಲಾಖಾ ವತಿಯಿಂದ ನಿರ್ವಹಣೆ ಮಾಡಲು ಕ್ರಮ ಕೈಗೊಂಡು ಕೈಗೊಂಡಿರುವ ಕ್ರಮದ ಮಾಹಿತಿಯೊಂದಿಗೆ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

(ಕ್ರಮ:- ತೋಟಗಾರಿಕೆ ಅಧೀಕ್ಷಕರು ಬಿ.ಡಿ.ಎ)

8) ಸ್ಲಂಬೋರ್ಡ್-ಈ ಸಭೆಯಲ್ಲಿ ಇ.ಡಬ್ಲ್ಯೂ.ಎಸ್ ಕ್ವಾಟ್ರರ್ಸ್‌ನ ವಸತಿಗಳಲ್ಲಿ ವಾಸಿಸುತ್ತಿರುವವರಿಗೆ ಹಕ್ಕು ಪತ್ರವನ್ನು ನೀಡುವ ಬಗ್ಗೆ ಹಾಗೂ ಬೆಸ್ಕಾಂ ಮೀಟರ್‌ಗಳನ್ನು ಅಳವಡಿಸುವ ಬಗ್ಗೆ ಶ್ರೀ.ಎರ್ರನ್ ಸುರೇಶ್ ಕುಮಾರ್ ರವರು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಂಡು ತೆಗೆದುಕೊಂಡಿರುವ ಕ್ರಮದ ಬಗ್ಗೆ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಬೇಕೆಂದು ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

(ಕ್ರಮ: ಸಹಾಯಕಕಾರ್ಯಪಾಲಕಅಭಿಯಂತರರುಕೊಳಚೆ ನಿರ್ಮೂಲನ ಮಂಡಳಿ ಇಲಾಖೆ)

9) ಸಂಚಾರಿ ಪೋಲೀಸ್ ಇಲಾಖೆ- ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ರಸ್ತೆಗಳಲ್ಲಿ ಅನುಪಯುಕ್ತ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿರುವುದನ್ನು ತೆರವುಗೊಳಿಸಲು ಸಾರ್ವಜನಿಕರು ಸಭೆಯಲ್ಲಿ ಕೋರಿದ್ದು, ಸಭೆಯಲ್ಲಿ ಹಾಜರಿದ್ದ ಶ್ರೀ.ರಾಜಶೇಖರ್.ಎ.ಎಸ್.ಐ(ಸಂಚಾರಿ)ರವರು ಅಂತಹ ವಾಹನಗಳನ್ನು ಕಂಡು ಬಂದ ಕೂಡಲೇ ಪೋಲೀಸ್ ಕಂಟ್ರೋಲ್ ರೂಂ ನಂ.100 ಗೆ ಕರೆ ಮಾಡಿದ್ದಲ್ಲಿ ತಕ್ಷಣ ಟೋಯಿಂಗ್ ವಾಹನದಿಂದ ಅನುಪಯುಕ್ತ ವಾಹನಗಳನ್ನು ತೆರವುಗೊಳಿಸಲಾಗುವುದು ಎಂದು ಸಭೆಯಲ್ಲಿತಿಳಿಸಿದರು.

(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್‌ಠಾಣೆ)

ಮುಂದುವರೆದು ದಿನಾಂಕ: 18.12.2021 ರಂದು ವಾರ್ಡ್ ಸಮಿತಿ ಸಭೆಗೆ ಗೈರುಹಾಜರಾಗಿರುವ ಅರಣ್ಯಾಧಿಕಾರಿಗಳು, ಲೇಬರ್ ಇನ್ಸ್‌ಪೆಕ್ಟರ್ ಕಾರ್ಮಿಕ ಇಲಾಖೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗಲು ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್‌ಅಧಿಕಾರಿರವರು ಸೂಚಿಸಿರುತ್ತಾರೆ.

ಈ ಸಭೆಯಲ್ಲಿ ಹಾಜರಿದ್ದವೆಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

27/12/21

ಸಹಾಯಕಅಭಿಯಂತರರು ಹಾಗೂ
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

27/12/21

ಜಂಟಿ ನಿರ್ದೇಶಕರು (ನಗರಯೋಜನೆ- ಸ್ಕ್ವಾಡ್)
ಹಾಗೂ ನೋಡಲ್‌ಅಧಿಕಾರಿ& ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ಕೌನ್ಸಿಲ್ ಕಾರ್ಯದರ್ಶಿ ... ನಂ. ... ದಿನಾಂಕ 30/12/21

**<u>ಪ್ರತಿಯನ್ನು:</u>**

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರಕಛೇರಿರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರಕ್ರಮಕ್ಕಾಗಿಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಕೊಳಚೆ ನಿರ್ಮೂಲನ ಮಂಡಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಉಪ- ವಿಭಾಗ ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೋರ್‌ವೆಲ್ ಉಪ-ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ- ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಫ್ರೆಜರ್‌ಟೌನ್ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
14. ಉಪ-ಅರಣ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
15. ಲೇಬರ್‌ಇನ್ಸ್‌ಪೆಕ್ಟರ್‌ಕಾರ್ಮಿಕ ಇಲಾಖೆ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
16. ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್‌ಠಾಣೆರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
17. ತೋಟಗಾರಿಕೆ ಅಧೀಕ್ಷಕರು ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
18. ತೋಟಗಾರಿಕೆ ಸಹಾಯಕ ನಿರ್ದೇಶಕರು ಬಿ.ಡಿ.ಎ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
19. ಕಛೇರಿಕಡತಕ್ಕೆ.